ಕಿಮೀ ಉದ್ದವಿದ್ದು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಾದು ಹೋಗುತ್ತಿರುತ್ತದೆ.

ಸದರಿ ರಸ್ತೆಯ ಸರಪಳಿ 59.59 ರಿಂದ 60.00, 70.00 ರಿಂದ 92.60, 97.60 ರಿಂದ 112.40, 117.40 ರಿಂದ 122.20 ಕಿಮೀ ಒಟ್ಟು 42.61 ಕಿಮೀ ಉದ್ದವು ಸುಸ್ಥಿತಿಯಲ್ಲಿದ್ದು ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

ಸದರಿ ರಸ್ತೆಯ ಉಳಿಕೆ ಸರಪಳಿಗಳಲ್ಲಿ ಒಟ್ಟು 54.70 ಕಿಮೀ ಉದ್ದದ ಆಯ್ದ ಭಾಗಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಂಡಿದ್ದು ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

473 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ರಾಸ್ ಕಣ್ಣಾನೂರು ರಸ್ತೆಯಲ್ಲಿ ಪಶ್ಚಿಮವಾಹಿನಿಯಿಂದ ಪಾಲಹಳ್ಳಿ, ಬೆಳಗೊಳ, ಕೆ.ಆರ್.ಸಾಗರ ಹಾಗೂ ಇಳುವಾಳಕ್ಕೆ ಹೋಗುವ ರಸ್ತೆಗಳು ಕಿರಿದಾಗಿದ್ದು ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿಗೆ ಸರಕಾರ ಕೈಗೊಂಡಿರುವ ಕ್ರಮವೇನು;

ಇ) ಈ ಸ್ಥಳವು ಪ್ರವಾಸೋದ್ಯಮಕ್ಕೆ ಅತ್ಯಂತ ಪೂರಕವಾಗಿದ್ದು ಮೈಸೂರು–ಕೆ.ಆರ್.ಸಾಗರ ಮತ್ತು ರಂಗನತಿಟ್ಟಿಗೆ ಹೋಗುವ ಪ್ರವಾಸಿಗರು ಈ ರಸ್ತೆಯಲ್ಲಿಯೇ ಸಂಚರಿಸಬೇಕಾಗಿರುವುದರಿಂದ ಕೂಡಲೇ ರಸ್ತೆಯ ಅಗಲೀಕರಣ ಕಾರ್ಯ ಕೈಗೊಳ್ಳಲಾಗುವುದೇ;

ಈ) ಹಾಗಿದ್ದಲ್ಲಿ, ಒದಗಿಸಲಾಗಿರುವ ಅನುದಾನವೆಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮದ್ರಾಸ್ ಕಣ್ಣಾನೂರು ರಸ್ತೆಯಲ್ಲಿ ಪಶ್ಚಿಮವಾಹಿನಿಯಿಂದ ಪಾಲಹಳ್ಳಿ, ಬೆಳಗೊಳ, ಕೆ.ಆರ್.ಸಾಗರ ಹಾಗೂ ಇಳುವಾಳಕ್ಕೆ ಹೋಗುವ ರಸ್ತೆ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಸರಪಳಿ 127.50 ರಿಂದ 145.00 ಕಿಮೀ

ವರೆಗೆ ಒಟ್ಟು 17.50 ಕಿಮೀ ಉದ್ದವಿರುತ್ತದೆ. ರಸ್ತೆಯ ಅಗಲ ಸರಪಳಿ 127.50 ರಿಂದ 139.00 ಕಿಮೀ ವರೆಗೆ 7.00 ಮೀ. ಗಳಿರುತ್ತದೆ.

ಹಾಗೂ ಸರಪಳಿ 139.00 ರಿಂದ 145.0 ಕಿಮೀ ವರೆಗೆ 5.50 ಮೀ ಅಗಲವಿರುತ್ತದೆ.

ಮೇಲೆ ತಿಳಿಸಿದಂತೆ ರಸ್ತೆಯ ಅಗಲವು IRC ನ ಮಾನದಂಡಗಳ ಪ್ರಕಾರ ಹಾಲಿ ಇರುವ ರಸ್ತೆಯ ಅಗಲವು ರಸ್ತೆಯಲ್ಲಿನ ವಾಹನ ಸಾಂದ್ರತೆಯನ್ನು ಹೊರುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆದಾಗ್ಯೂ ಇದೇ ರಸ್ತೆಯ ಸರಪಳಿ 127.80 ರಲ್ಲಿ ಲೆವೆಲ್ ಕ್ರಾಸಿಂಗ್ ಇದ್ದು ಗೇಟ್ ಮುಚ್ಚಿದಾಗ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ಅಡಚಣೆ ಯಾಗಿರುತ್ತದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಪ್ರಸಕ್ತ ಸಾಲಿನ ಪೂರ್ವ ಮುಂಗಾರು ಹಾಗೂ ನಂತರದ ಮುಂಗಾರು ಯೋಜನೆಯಡಿ ಒದಗಿಸಿದ ರೂ.15.00 ಲಕ್ಷಗಳ ಅನುದಾನದಡಿ ಸದರಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲಾಗಿದೆ.

ಇ) ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

476 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಿಂದ ಮದ್ದೂರು ಗಡಿವರೆಗೆ ಮಾರ್ಗ ಚೀರನಹಳ್ಳಿ, ಹಳುವಾಡಿ, ತಗ್ಗಹಳ್ಳಿ ರಸ್ತೆ ಹಾಗೂ ಮಂಡ್ಯ ಗುತ್ತಲು ರಸ್ತೆಯಿಂದ ಚನ್ನಪ್ಪನದೊಡ್ಡಿ ಬೇಲೂರು ಮಾರ್ಗವಾಗಿ ಕನ್ನಲಿಗೆ ಹೋಗುವ ರಸ್ತೆ ಮತ್ತು ಮಂಡ್ಯ ಬನ್ನೂರು ರಸ್ತೆ ಮಾರ್ಗ – ಕೊತ್ತತ್ತಿ, ಬೇವಿನಹಳ್ಳಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?